# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 30.07.2010**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಮಳೆಗಾಲದಲ್ಲಿ ಸಂಭವಿಸುವಂತಹ ಅನಾಹುತಗಳನ್ನು ನಿಯಂತ್ರಿಸಲು ಮಳೆ ನೀರಿನ ದೊಡ್ಡ ಮೋರಿಯಿಂದ ಹೂಳೆತ್ತುವುದು, ರಸ್ತೆ ಬದಿ ಚರಂಡಿ ಸ್ವಚ್ಛಗೊಳಿಸುವುದು, ಮರದಲ್ಲಿ ಒಣಗಿದ ಮರದ ಟೊಂಗೆಗಳನ್ನು ತೆರವುಗೊಳಿಸುವುದು, ಚರಂಡಿಗಳ ಒತ್ತುವರಿ ತೆರವು ಮತ್ತು ಅಗಲೀಕರಣ ಹೀಗೆ ಹಲವಾರು ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

ತಗ್ಗು ಪ್ರದೇಶದಲ್ಲಿ ವಾಸಿಸುವ ನಿವಾಸಿಗಳಿಗೆ ಹೆಚ್ಚಿನ ಮಳೆಯಾದಲ್ಲಿ ಆಗುವಂತಹ ತೊಂದರೆಗಳ ಕುರಿತು ಎಚ್ಚರಿಕೆ ನೀಡಿ ವಿಶೇಷ ಸೂಚನೆಗಳುಳ್ಳ ಫಲಕಗಳನ್ನು ಹಾಕುವುದು, ಮಳೆ ನೀರಿನ ದೊಡ್ಡ ಮೋರಿಗಳ ಪಕ್ಕದಲ್ಲಿ ಸಾರ್ವಜನಿಕರು ಓಡಾಡದಂತೆ ತಂತಿ ಬೇಲಿ ಹಾಕುವುದು, ಸಾರ್ವಜನಿಕರು ಓಡಾಡುವಂತಹ ರಸ್ತೆ ಬದಿ ಮೋರಿಗಳ ಮೇಲೆ ಚಪ್ಪಡಿ ಕಲ್ಲು ಹಾಸುವಂತಹ ಮುಂತಾದ ಸುರಕ್ಷತೆ ಕಾಮಗಾರಿಗಳನ್ನು ನಿರ್ವಹಿಸಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಎಚ್ಚರಿಕೆ ವಹಿಸಲಾಗಿರುತ್ತದೆ.

ನಗರದಲ್ಲಿ ಒಂದು ಗಂಟೆ ಸಮಯದಲ್ಲಿ 45 ಮಿ.ಮೀ. ಗಿಂತ ಹೆಚ್ಚು ಮಳೆಯಾದಾಗ ಬಿದ್ದ ಮಳೆ ನೀರು ಸರಾಗವಾಗಿ ಹರಿದು ಪ್ರಮುಖ ಕಾಲುವೆಗಳಿಗೆ ಸೇರಲು ಕನಿಷ್ಠ ಅರ್ಧ ಗಂಟೆ ಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಚರಂಡಿಗಳಲ್ಲಿ ನೀರು ತುಂಬಿ ಹರಿದು ಅನಾಹುತಗಳು ಸಂಭವಿಸುತ್ತವೆ. ಮತ್ತು ಅನಧಿಕೃತವಾಗಿ ತಗ್ಗು ಪ್ರದೇಶದಲ್ಲಿ ನಿರ್ಮಾಣಗೊಂಡ ಬಡಾವಣೆಗಳಲ್ಲಿ ಮನೆಗಳಿಗೆ ನೀರು ನುಗ್ಗಿ ಆಸ್ತಿ ಪಾಸ್ತಿಗಳಿಗೆ ಅಪಾರ ನಷ್ಟ ಉಂಟಾಗುತ್ತದೆ.

ಆದ್ದರಿಂದ ಸಾರ್ವಜನಿಕರು ಮಳೆಗಾಲದಲ್ಲಿ ಸದಾ ಜಾಗರೂಕತೆಯಿಂದ ಇದ್ದು, ಈ ಕೆಳಕಂಡ ಎಚ್ಚರಿಕೆ ಕ್ರಮಗಳನ್ನು ವಹಿಸಲು ಪಾಲಿಕೆ ಆಯುಕ್ತರು ಕೋರಿದ್ದಾರೆ.

1) ಮಳೆಗಾದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮೋರಿಗಳು ತುಂಬಿ ಹರಿಯುವುದರಿಂದ ಮಕ್ಕಳು ಮತ್ತು ವೃದ್ಧರನ್ನು ಮೋರಿಗಳತ್ತ ಬಿಡದಂತೆ ಎಚ್ಚರವಹಿಸುವುದು.
2) ಮಳೆಗಾಲದ ಸಂದರ್ಭದಲ್ಲಿ ತಗ್ಗುಪ್ರದೇಶಗಳಲ್ಲಿ ನೀರು ಸಂಗ್ರಹಗೊಳ್ಳುವುದರಿಂದ ಹಾಗೂ ಕೆಲವು ಮ್ಯಾನ್‌ಹೋಲ್ ತೆರೆದುಕೊಂಡು ನೀರು ತುಂಬಿಕೊಳ್ಳುವುದರಿಂದ ಗುರುತಿಸಲು ಸಾಧ್ಯವಿಲ್ಲದ ಕಾರಣ ರಾತ್ರಿ ಸಮಯದಲ್ಲಿ ಹೊರಗಡೆ ಹೋಗದಂತೆ ಎಚ್ಚರವಹಿಸುವುದು.
3) ಮಳೆಗಾಲದ ಸಂದರ್ಭದಲ್ಲಿ ಅತಿಯಾದ ಗಾಳಿಯಿಂದಾಗಿ ಮರದ ರೆಂಬೆಗಳು ಮುರಿದು ಬೀಳುವುದರಿಂದ ಮರದ ಕೆಳಗೆ ನಿಲ್ಲಬಾರದು ಮತ್ತು ವಾಹನಗಳನ್ನು ನಿಲ್ಲಸಬಾರದು.
4) ಅತೀ ಹೆಚ್ಚಾದ ಮಳೆಯಿಂದಾಗಿ ಕಟ್ಟಡದ ಗೋಡೆಗಳು ಶಿಥಿಲಗೊಳ್ಳುವುದರಿಂದ ಅಂತಹ ಸ್ಥಳಗಳಲ್ಲಿ ಸಾರ್ವಜನಿಕರು ಓಡಾಡದಂತೆ ಎಚ್ಚರಿಕೆ ವಹಿಸುವುದು.
5) ಮಳೆಗಾಲದ ಸಂದರ್ಭದಲ್ಲಿ ವಿದ್ಯುತ್ ಕಂಬಗಳಿಂದ ವಿದ್ಯುತ್ ಸ್ಪರ್ಶವಾಗುವ ಸಾಧ್ಯತೆ ಹೆಚ್ಚಾಗಿರುವುದರಿಂದ ವಿದ್ಯುತ್ ಕಂಬಗಳನ್ನು ಸಾರ್ವಜನಿಕರು ಮುಟ್ಟದಂತೆ ಎಚ್ಚರವಹಿಸುವುದು.
6) ಕೊಳಚೆ ಮತ್ತು ತಗ್ಗು ಪ್ರದೇಶಗಳಲ್ಲಿ ಮನೆಗಳಿಗೆ ನೀರು ನುಗ್ಗಿ ತೊಂದರೆಯಾಗುವ ಸೂಚನೆ ಕಂಡುಬಂದಲ್ಲಿ ತಕ್ಷಣವೇ ಪಾಲಿಕೆಯ ನಿಯಂತ್ರಣ ಕೊಠಡಿಗೆ ಮಾಹಿತಿ ನೀಡುವುದು. ಕೂಡಲೇ ಎಲ್ಲಾ ರೀತಿಯ ಸಹಾಯ ಒದಗಿಸಲಾಗುವುದು.
7) ಬೃಹತ್ ನೀರುಗಾಲುವೆಯ ಹತ್ತಿರದ ತಗ್ಗು ಪ್ರದೇಶದಲ್ಲಿ ವಾಸವಾಗಿರುವ ಜನರು ಮುಂಜಾಗರೂಕತೆ ವಹಿಸಿ, ಸುರಕ್ಷಿತ ಸ್ಥಳಕ್ಕೆ ಹೋಗಬೇಕು.

ಬೃಹತ್ ಬೆಂಗಳುರು ಮಹಾನಗರ ಪಾಲಿಕೆಯು ಸಾರ್ವಜನಿಕರ ಸಹಾಯಕ್ಕೆ ಎಲ್ಲಾ ವಲಯಗಳಲ್ಲಿ ದಿನದ 24 ಗಂಟೆ ಕಾರ್ಯನಿರ್ವಹಿಸುವ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಿದೆ. ಸಾರ್ವಜನಿಕರು ದಯವಿಟ್ಟು ಮಳೆ ನೀರಿನಿಂದ ಸಂಭವಿಸಬಹುದಾದ ಅನಾಹುತಗಳ ಬಗ್ಗೆ ಮುಂಜಾಗ್ರತೆ ವಹಿಸಿ, ಪಾಲಿಕೆ ನಿಯಂತ್ರಣ ಕೊಠಡಿಗಳಿಗೆ ಮಾಹಿತಿ ನೀಡಲು ಕೋರಿದ್ದಾರೆ.

ನಿಯಂತ್ರಣ ಕೊಠಡಿಗಳ ದೂರವಾಣಿ ಸಂಖ್ಯೆಗಳು: ಐ.ಪಿ.ಪಿ. ಕೇಂದ್ರ 22660000, ಕೇಂದ್ರ ಕಛೇರಿ 22221188, ದಕ್ಷಿಣ ವಲಯ 26566362, ಪೂರ್ವ ವಲಯ 22975803, ಪಶ್ಚಿಮ ವಲಯ 23561692, ದಾಸರಹಳ್ಳಿ 28393688, 22975904, ಯಲಹಂಕ 22975936, ಬೊಮ್ಮನಹಳ್ಳಿ 25732447, 25735642, ಮಹದೇವಪುರ 28512300 / 01, ರಾಜರಾಜೇಶ್ವರಿನಗರ 28601851, 28600954 ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಲು ಕೋರಿದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 30.07.2010**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಹದೇವಪುರ ವಲಯ ವ್ಯಾಪ್ತಿಯ ವಿಜಿನಾಪುರ ವಾರ್ಡ್ ನಂ.51 ರಲ್ಲಿ ಎಸ್.ಪಿ. ನಾಯ್ಡು ಬಡಾವಣೆಯಲ್ಲಿ ಮಳೆ ನೀರು ಹರಿಸುವ ಚರಂಡಿಯನ್ನು ಅಕ್ರಮವಾಗಿ ಮುಚ್ಚಿಸಿ ಖಾಲಿ ನಿವೇಶನದಲ್ಲಿ ಅಕ್ರಮವಾಗಿ ಮರಳನ್ನು ಸಂಗ್ರಹಣೆ ಮಾಡುತ್ತಿದ್ದ ವಾಹನ ಸಂಖ್ಯೆ: ಕೆ.ಎ-53 3607 ವಾಹನವನ್ನು ಜಪ್ತಿ ಮಾಡಲಾಗಿರುತ್ತದೆ.

ಸದರಿಯವರು ದಿನಾಂಕ: 19.07.2010 ರಂದು ಬೆಳಿಗ್ಗೆ ಮರಳು ಸಂಗ್ರಹಣೆ ಮಾಡುತ್ತಿದ್ದು, ಯಾವುದೇ ಪ್ರಾಧಿಕಾರದ ಅನುಮತಿಯನ್ನು ಕೈಯಲ್ಲಿರಿಸಿಕೊಂಡಿರುವುದಿಲ್ಲ. ಸದರಿಯವರು ಮಳೆ ನೀರು ಹರಿಸುವ ಚರಂಡಿಯನ್ನು ಅಕ್ರಮವಾಗಿ ಮುಚ್ಚಿಸಿ, ಖಾಲಿ ನಿವೇಶನದಲ್ಲಿ ಅಕ್ರಮವಾಗಿ ಮರಳು ದಂಧೆ ಮಾಡುತ್ತಿರುವುದು ನಿಯಮ ಬಾಹಿರ ಕಾರ್ಯವಾಗಿರುತ್ತದೆ. ಆದಾಗ್ಯೂ ಅರ್ಜಿದಾರರು ತಾವು ಸ್ವಂತ ಕೆಲಸಕ್ಕೆ ಮರಳು ಸಂಗ್ರಹಣೆ ಮಾಡುತ್ತಿದ್ದುದಾಗಿ ಹಾಗೂ ಅನುಮತಿ ಇಲ್ಲದೆ ಮರಳು ಸಂಗ್ರಹಿಸಿ ಅಕ್ಕಪಕ್ಕದ ಮನೆಗಳಿಗೆ ಕಿರಿಕಿರಿಯನ್ನುಂಟು ಮಾಡಿದ್ದಕ್ಕೆ ಸದರಿಯವರಿಗೆ ರೂ.2,620/- (ಎರಡು ಸಾವಿರದ ಆರು ನೂರ ಇಪ್ಪತ್ತು) ರೂ.ಗಳ ದಂಡವನ್ನು ವಿಧಿಸಲು ಉಪ ಆಯುಕ್ತರು (ಮಹದೇವಪುರ) ವಲಯ ರವರು ಆದೇಶಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** ದಿನಾಂಕ: 30.07.2010

## ***ಪಾದಚಾರಿ ಮಾರ್ಗ ಒತ್ತುವರಿ ತೆರವು***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ನಗರದ ಪ್ರಮುಖ ರಸ್ತೆಗಳ ಪಾದಚಾರಿ ಮಾರ್ಗ ಒತ್ತುವರಿ ತೆರವುಗೊಳಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ದಿನಾಂಕ: 19.07.2010 ರಂದು ಕೆ.ಆರ್. ಪುರ ಉಪ ವಿಭಾಗ ವ್ಯಾಪ್ತಿಯ ವಾರ್ಡ್ ನಂ. 52, ಕೆ.ಆರ್. ಪುರ ಹಾಗೂ ವಾರ್ಡ್ ನಂ.55, ದೇವಸಂದ್ರ ವ್ಯಾಪ್ತಿಗೆ ಒಳಪಡುವ ಐ.ಟಿ.ಐ. ಗೇಟ್ ಹತ್ತಿರ ಮತ್ತು ಹಳೇ ಮದ್ರಾಸ್ ರಸ್ತೆ ಹಾಗೂ ಕೆ.ಆರ್. ಪುರ ಸಂತೆ ಸಮೀಪದ ಪಾದಚಾರಿ ಮಾರ್ಗದ ಒತ್ತುವರಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ವಾರ್ಡ್‌ಗಳ ಅಭಿಯಂತರರು, ಪರಿಸರ ಅಭಿಯಂತರರು, ವಾರ್ಡ್‌ಗಳ ಆರೋಗ್ಯ ನಿರೀಕ್ಷಕರುಗಳು, ಪಾಲಿಕೆಯ ವಿಶೇಷ ಕಾರ್ಯಾಚರಣೆ ಪಡೆಯ ವಾಹನ, ಸಿಬ್ಬಂದಿಗಳು ಹಾಗೂ ಪೋಲಿಸ್ ಇಲಾಖೆಯ ಸಿಬ್ಬಂದಿಯೊಂದಿಗೆ ತೆರವುಗೊಳಿಸಲಾಯಿತು ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೆ.ಆರ್. ಪುರ) ಉಪ ವಿಭಾಗರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**